ಮೂಲಕುಳಮ್ ಅಮರಾವತಿ ಟಾಕೀಸಿನಲ್ಲಿ ಎರಡನೆಯ ಆಟ ಸಿನಿಮಾ ಆರಂಭಿಸುವ ಗುರುತಾಗಿ ಗಣನಾತನೇ ಹಾಡು ಕೇಳಿತು.

‘ಲೋ, ದೊಡ್ಡವನೇ’ ಎಂದು ಅಮ್ಮ ಕರೆದಳು. ‘ಏನಮ್ಮ’ ಎಂದು ಮುತ್ತುಸಾಮಿ ಅವಳಕಡೆ ತಿರುಗಿದ. ಆದರೆ ಅವಳು ಏನನ್ನೂ ಮಾತನಾಡಲಿಲ್ಲ. ನಾಲಿಗೆಯನ್ನು ಲೊಚಗುಟ್ಟುತ್ತ ತಲೆಯನ್ನು ತೂಗಿದಳು. ಅವನು ಮತ್ತೆ ‘ಏನಮ್ಮ?’ ಎಂದ. ‘ಏನೂ ಇಲ್ಲ ಮಲಗು’ ಎಂದು ಹೇಳಿ ಕಂಬದ ಪಕ್ಕದಲ್ಲಿ ಹಾಸಿಗೆಯನ್ನು ಹಾಕಿ ಮಲಗಿಕೊಂಡಳು. ದೀಪದ ಬತ್ತಿಯನ್ನು ಸಣ್ಣದಾಗಿಸಿ ಅವನೂ ಮಲಗಿಕೊಂಡ. ಕಣ್ಣುಗಳನ್ನು ಮುಚ್ಚಿದಕೂಡಲೆ ನಿದ್ದೆ ಬಂತು.

ಕನಸಿನಲ್ಲಿ ಎಲ್ಲೋ ಪಟಾಕಿ ಹೊಡೆಯುವ ಶಬ್ದ ಕೇಳಿಸಿತು. ಲಕ್ಷ್ಮಿ ಪಟಾಕಿ, ಆನೆ ಪಟಾಕಿ,

